

## ಈಗ ‘ಮಣಿಕರ್ಣಿಕಾ’ ಸರದಿ!

‘ಪದ್ಮಾವತ್’ ಗಲಾಟೆ ಮುಗಿದ ಬೆನ್ನಲ್ಲೇ ಇದೀಗ ‘ಮಣಿಕರ್ಣಿಕಾ’ ಗಲಾಟೆ ಶುರುವಾದಂತಿದೆ. ಕಂಗನಾ ರನೌತ್ ರಾಣಿ ಲಕ್ಷ್ಮಿಬಾಯಿಯ ಪಾತ್ರ ನಿರ್ವಹಿಸಿರುವ ‘ಮಣಿಕರ್ಣಿಕಾ’ ಚಿತ್ರದ ಶೂಟಿಂಗ್ ಭರದಿಂದ ನಡೆದಿದೆ. ಈ ಮಧ್ಯೆ ಸರ್ವ ಬ್ರಾಹ್ಮಣ್ ಮಹಾಸಭಾದ ಪದಾಧಿಕಾರಿಗಳು ರಾಣಿ ಲಕ್ಷ್ಮಿಬಾಯಿ ಪಾತ್ರದ ಬಗ್ಗೆ ತಕರಾರು ಎತ್ತಿದ್ದಾರೆ. ‘ಈ ಸಿನಿಮಾದಲ್ಲಿ ರಾಣಿ ಲಕ್ಷ್ಮಿಬಾಯಿ ಜತೆಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಏಜೆಂಟನ ಪಾತ್ರಧಾರಿಯ ರೊಮ್ಯಾಂಟಿಕ್ ಹಾಡಿನ ದೃಶ್ಯಗಳಿವೆ’ ಎನ್ನುವುದು ಬ್ರಾಹ್ಮಣರ ಸಂಘದ ಆರೋಪ.

‘ಅಂತಹ ಯಾವ ದೃಶ್ಯಗಳೂ ಚಿತ್ರದಲ್ಲಿಲ್ಲ. ಸುಮ್ಮನೆ ಕೆಲವರು ಕೀಳುಮಟ್ಟದ ಪ್ರಚಾರ ನಡೆಸಿದ್ದಾರೆ’ ಎನ್ನುವುದು ಕಂಗನಾ ಪ್ರತಿಕ್ರಿಯೆ. ‘ಬಾಹುಬಲಿ’ ಚಿತ್ರದ ಕಥೆಗಾರ ಕೆ.ವಿ.ವಿಜಯೇಂದ್ರ ಪ್ರಸಾದ್ ಈ ಚಿತ್ರಕ್ಕೆ ಕಥೆ ಬರೆದಿದ್ದಾರೆ. ‘ಅಂತಹ ಯಾವ ದೃಶ್ಯಗಳೂ ಇಲ್ಲ. ನನಗೆ ರಾಣಿ ಲಕ್ಷ್ಮಿಬಾಯಿ ಬಗ್ಗೆ ಗೌರವವಿದೆ. ಆಕೆ ಹುಟ್ಟಿದ್ದು ಕಾಶಿಯಲ್ಲಿ. ಆಕೆಯ ನಿಜಹೆಸರು ಮಣಿಕರ್ಣಿಕಾ. ನನ್ನ ಮಗಳ ಹೆಸರೂ ಮಣಿಕರ್ಣಿಕಾ’ ಎಂದಿದ್ದಾರೆ ವಿಜಯೇಂದ್ರ ಪ್ರಸಾದ್.

ಕಮಲ್ ಜೈನ್ ಮತ್ತು ಝೀ ಸ್ಟುಡಿಯೊ ನಿರ್ಮಿಸುತ್ತಿರುವ ‘ಮಣಿಕರ್ಣಿಕಾ’ ಶೂಟಿಂಗ್ ಹಂತದಲ್ಲೇ ಸುದ್ದಿ ಮಾಡುತ್ತಿರುವುದು ನೋಡಿದರೆ ಇದೂ ಪ್ರಚಾರದಲ್ಲಿ ಪದ್ಮಾವತ್ ದಾರಿಯೇ ಹಿಡಿಯಬಹುದು ಅನ್ನಿಸುತ್ತಿದೆ. ‘ನಿರ್ಮಾಪಕರು ರಾಣಿ ಲಕ್ಷ್ಮೀಬಾಯಿಯ ರೊಮ್ಯಾಂಟಿಕ್ ಹಾಡುಗಳಿಲ್ಲ ಎಂದು ಅಫಿದಾವಿಟ್ ಕೊಡಬೇಕು’ ಎಂದು ಸರ್ವಬ್ರಾಹ್ಮಣ ಸಭಾದ ಪದಾಧಿಕಾರಿಗಳು ರಾಜಸ್ಥಾನದ ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಕೊಟ್ಟಿದ್ದಾರೆ.

ಜಾಗರ್ಲಮುಡಿ ರಾಧಾಕೃಷ್ಣ ನಿರ್ದೇಶನದ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ವಿಜೇತ ಡಿಸೈನರ್ ನೀತಾ ಲುಲ್ಲಾ ವಸ್ತ್ರವಿನ್ಯಾಸ ಈಗಾಗಲೆ ಎಲ್ಲರ ಕುತೂಹಲ ಕೆರಳಿಸಿದೆ. ಬರ್ಫಿ, ಮರ್ದಾನಿ, ಪಿಕು ಚಿತ್ರಗಳಲ್ಲಿ ನಟಿಸಿರುವ ಬಂಗಾಳಿ ನಟ ಜಿಶು ಸೇನ್‌ಗುಪ್ತಾ ಈ ಚಿತ್ರದಲ್ಲಿ ಗಂಗಾಧರರಾವ್ ಪಾತ್ರ ನಿರ್ವಹಿಸಿದ್ದಾನೆ.

■ ಬಿಂದು

## ರಣವೀರ್‌ಸಿಂಗ್ ಖುಷ್

‘ಪದ್ಮಾವತ್’ ಚಿತ್ರದ ಗಳಿಕೆ 200 ಕೋಟಿ ರೂಪಾಯಿ ದಾಟಿ ಮುನ್ನಡೆಯುತ್ತಿದ್ದು, ಚಿತ್ರದಲ್ಲಿ ಖಿಲ್ಜಿ ಪಾತ್ರಧಾರಿ ರಣ್‌ವೀರ್‌ಸಿಂಗ್ ತುಂಬಾ ಖುಷಿಯಾಗಿದ್ದಾನೆ. ಹೋದಲ್ಲಿ ಬಂದಲ್ಲಿ ಎಲ್ಲರೂ ಖಳನಾಯಕ ಅಲ್ಲಾವುದ್ದೀನ್ ಖಿಲ್ಜಿಯ ಪಾತ್ರದ ಬಗ್ಗೆಯೇ ಮಾತನಾಡುತ್ತಿದ್ದಾರೆ ಎನ್ನುವುದು ಆತನ ಖುಷಿಗೆ ಕಾರಣ. ‘ನಿರ್ದೇಶಕ ಬನ್ಸಾಲಿ ಅವರಿಗೆ ತುಂಬ ಕೃತಜ್ಞ. ಒಳ್ಳೆಯ ಪಾತ್ರ ಕೊಟ್ಟಿದ್ದಾರೆ. ಅವರು ಏನು ಹೇಳಿದರೂ ನಾನು ಮಾಡುತ್ತೇನೆ. ಈ ಹಿಂದೆಯೂ ಅವರ ಜತೆಗೆ ನಟಿಸಿದ ರಾಮ್‌ಲೀಲಾ, ಬಾಜಿರಾವ್ ಮಸ್ತಾನಿ ಚಿತ್ರಗಳಲ್ಲಿ ಅತ್ಯುತ್ತಮ ಪಾತ್ರಗಳನ್ನೇ ಕೊಟ್ಟಿದ್ದಾರೆ. ನಮ್ಮದು ವಿಶೇಷ ಬಾಂಧವ್ಯ’ ಎಂದಿದ್ದಾನೆ ರಣ್‌ವೀರ್. ‘ಸೋಲು, ಗೆಲುವು ಎರಡನ್ನೂ ಸಮನಾಗಿ ಸ್ವೀಕರಿಸುತ್ತೇನೆ. ಖಿಲ್ಜಿ ಪಾತ್ರದ ಗೆಲುವಿನಿಂದ ನನಗೆ ಇನ್ನಷ್ಟು ಹುಮ್ಮಸ್ಸು ಮೂಡಿದೆ. ಇನ್ನಷ್ಟು ಒಳ್ಳೆಯ ಪಾತ್ರಗಳನ್ನು ಮಾಡಬೇಕು’ ಎಂದಿದ್ದಾನೆ ಆತ.

ಖಿಲ್ಜಿ ಪಾತ್ರದ ಗೆಲುವನ್ನು ಸಂಭ್ರಮಿಸಲೂ ರಣ್‌ವೀರ್‌ಗೆ ಸಮಯವಿಲ್ಲ. ಆತನೀಗ ಜೋಯಾ ಅಖ್ತರ್ ನಿರ್ದೇಶನದ ‘ಗಲ್ಲಿ ಬಾಯ್’ ಚಿತ್ರದಲ್ಲಿ ಬ್ಯುಸಿ. ಬೀದಿಬದಿ ಹಾಡಿ ಕುಣಿಯುವ ರ್‍ಯಾಪರ್‌ನ ಪಾತ್ರವದು.

